ಎಷ್ಟು;

ಅ) ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ: ಇವುಗಳಲ್ಲಿ ಶಿಕ್ಷೆಗೆ ಒಳಪಟ್ಟ ಪ್ರಕರಣಗಳು ಎಷ್ಟು:

ಇ) ರಾಜ್ಯದ ಕರಾವಳಿ ಯುದ್ದಕ್ಕೂ ಮಾದಕ ದ್ರವ್ಯಗಳ ಮಾರಾಟ ಯಥೇಚ್ಛವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) 2001-2002 (30-6-02ರವರೆಗೆ) ಒಟ್ಟು 635 ಮಾದಕ ದ್ರವ್ಯ ಪ್ರಕರಣಗಳನ್ನು ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕಾರ ದಾಖಲು ಮಾಡಲಾಗಿದೆ.

ಆ) 378

10 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತದೆ.

ಇ) ಇಲ್ಲ. ಕೆಲವು ಕಡೆ ಕದ್ದು ಮುಚ್ಚಿ ಮಾದಕ ದ್ರವ್ಯ ಮಾರಾಟ ಕಂಡು ಬಂದಿದ್ದು, ಇಂತಹ ವಿಚಾರದಲ್ಲಿ ಕಳ್ಳ ಸಾಗಾಣಿಕೆ, ಮಾರಾಟ ಸಂಬಂಧವಾಗಿ ಮಾಹಿತಿ ಸಂಗ್ರಹಿಸಿ ದಾಳಿಗಳನ್ನು ನಿರ್ವಹಿಸಿ ಕೇಸುಗಳನ್ನು ದಾಖಲು ಮಾಡಲಾಗುತ್ತಿದೆ. ಎಲ್ಲಾ ಜಿಲ್ಲೆಯ ಅಧಿಕಾರಿಗಳಿಗೆ ಕಟ್ಟೆಚ್ಚರಿಕೆ ನೀಡಿ ಇಂತಹ ಅಕ್ರಮ ಚಟುವಟಿಕೆಗಳ ಸಂಬಂಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಹಾಗೂ ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ನಗರದಲ್ಲಿ ನೀರಿನ ಸಮಸ್ಯೆ

231 (1931) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಳೆ ಬಂದೆ ಕೆ.ಆರ್. ಸಾಗರದ ನೀರಿನ ಪ್ರಮಾಣ ಕಡಿಮೆಯಾಗಿ ಮೈಸೂರು ನಗರಕ್ಕೆ ನೀರಿನ ಸಮಸ್ಯೆ ಉಂಟಾಗಲಿದ್ದು, ಈ ಬಗ್ಗೆ ಸರ್ಕಾರ ಯಾವ ಯಾವ ಮುನ್ನೆಚ್ಚರಿಕೆ ಕ್ರಮ ಕೈ ಗೊಂಡಿದೆ? (ವಿವರ ಒದಗಿಸುವುದು).

ಆ) ಈ ರೀತಿಯಾದ ಸಮಸ್ಯೆಗಳು ಪ್ರತಿ ವರ್ಷ ಉಂಟಾಗುತ್ತಿದ್ದು, ಇದರ ಶಾಶ್ವತ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ವಿವರಿಸಿ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ 2000ನೇ ಮೇ ತಿಂಗಳಲ್ಲಿ ಹೊಂಗಳ್ಳಿಯ ತುರ್ತು ಯಂತ್ರಾಗಾರದಲ್ಲಿ ಹಾಲಿ ಇದ್ದ ಯಂತ್ರಗಳನ್ನು ಸರಿಪಡಿಸಿ ಹಾಗೂ ಹೊಸದಾಗಿ ಒಂದು ಪೈಪ್ ಲೈನ್ ಹಾಗೂ ಪಂಪ್ ಅಳವಡಿಸಿ ನದಿಯಿಂದ ನೇರವಾಗಿ ಒಟ್ಟು 54.50 ಎಂಎಲ್‌ಡಿ ನೀರನ್ನು ಹೊಂಗಳ್ಳಿ ಯಂತ್ರಾಗಾರಕ್ಕೆ ಪಂಪ್ ಮಾಡಿ, ಅಲ್ಲಿಂದ ಮೈಸೂರು ನಗರಕ್ಕೆ ತುರ್ತು ನೀರು ಸರಬರಾಜು ವ್ಯವಸ್ಥೆಯನ್ನು ರೂ. 84.00 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಿ ಬೇಸಿಗೆ ಕಾಲದಲ್ಲಿ ನೀರು ಪೂರೈಕೆ ಸಮಸ್ಯೆಗೆ ಪರಿಹಾರ ಒದಗಿಸಲಾಗಿದೆ.

ಸದರಿ ಯೋಜನೆಯನ್ನು ಮೈಸೂರು ಮಹಾನಗರ ಪಾಲಿಕೆ ಇವರಿಗೆ ಹಸ್ತಾಂತರಿಸಲಾಗಿದ್ದು, ಸದರಿ ವ್ಯವಸ್ಥೆಯನ್ನು ಕಳೆದ ಎರಡು ವರ್ಷಗಳಿಂದ ಮೈಸೂರು ಮಹಾನಗರ ಪಾಲಿಕೆಯವರು

ನಿರ್ವಹಿಸುತ್ತಿದ್ದಾರೆ.

ಇದಲ್ಲದೆ, ಮೈಸೂರು ನಗರಕ್ಕೆ ಕುಡಿಯುವ ನೀರಿಗಾಗಿ ಕೂಂಗಳ್ಳಿ, ಮತ್ತು ಬೆಳಗೊಳ ಸ್ಥಾವರಗಳಿಗೆ ಕಾವೇರಿ ನದಿಯಿಂದ ನೇರವಾಗಿ ನೀರು ಸರಬರಾಜು ಮಾಡಲು ಪ್ರತ್ಯೇಕವಾಗಿ ರೂ. 885.00 ಲಕ್ಷ ಮತ್ತು ರೂ. 455.00 ಲಕ್ಷಗಳಿಗೆ ಅಂದಾಜುಗಳನ್ನು ತಯಾರಿಸಿ ಮಂಡಳಿಯಿಂದ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಸಲುವಾಗಿ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿದೆ.

2. ಏಷ್ಯಾಭಿವೃದ್ಧಿ ಬ್ಯಾಂಕ್ ನೆರವಿನಿಂದ ಮೈಸೂರು ನಗರಕ್ಕೆ 4ನೇ ಹಂತದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ. 31.47 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು ಏಪ್ರಿಲ್ 2002ರಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯಿಂದ ಮೈಸೂರು ನಗರಕ್ಕೆ ಮೊದಲ ಹಂತದಲ್ಲಿ 2011 ಇಸವಿ ಜನಸಂಖ್ಯೆಗೆ ಅಗತ್ಯವಾದ ದಿನಂ ಪ್ರತಿ 50 ದಶಲಕ್ಷ ಲೀಟರ್ ಹೆಚ್ಚುವರಿ ನೀರನ್ನು ಒದಗಿಸಲು ಯೋಜಿಸಲಾಗಿದೆ. ಹಾಗೂ 2ನೇ ಹಂತದಲ್ಲಿ 2026ನೇ ಇಸವಿಯ ನಗರದ ಜನಸಂಖ್ಯೆಗೆ ಅಗತ್ಯವಾದ ಇನ್ನೂ 100 ದಶಲಕ್ಷ ಲೀಟರ್ ಹೆಚ್ಚುವರಿ ನೀರನ್ನು ಒದಗಿಸಲು ಯೋಜಿಸಲಾಗಿದೆ. ಈ ಯೋಜನೆಯಡಿಯಲ್ಲಿ ಹಾಲಿ 50 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಕೈಗಾರಿಕೋದ್ಯಮಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದು

232 (1903) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ತೆರಿಗೆ ಬಾಕಿಯನ್ನು ಉಳಿಸಿಕೊಂಡಿದ್ದ ಕೈಗಾರಿಕೋದ್ಯಮಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜನ ಕೈಗಾರಿಕೋದ್ಯಮಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರ ಒಟ್ಟು ಮೌಲ್ಯ ಎಷ್ಟು. (ಇವರುಗಳ ಹೆಸರುಗಳನ್ನು ತಿಳಿಸುವುದು)

ಇ) ಇವರುಗಳ ಉಳಿಸಿಕೊಂಡ ತೆರಿಗೆ ಬಾಕಿ ಎಷ್ಟು. (ಪ್ರತಿಯೊಬ್ಬರ ವಿವರ ನೀಡುವುದು)

ಈ) ಇವರುಗಳಿಂದ ಈಗಾಗಲೇ ಎಷ್ಟು ತೆರಿಗೆಯನ್ನು ವಸೂಲಿ ಮಾಡಲಾಗಿದೆ. ಇಲ್ಲದಿದ್ದರೆ ಕಾರಣವೇನು; (ವಿವರ ನೀಡುವುದು)?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976ರ ಅನುಸಾರ ಆಸ್ತಿ ತೆರಿಗೆ ಬಾಕಿ ಇದ್ದಲ್ಲಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದಿಲ್ಲ. ಕೇವಲ ಚರಾಸ್ತಿಗಳನ್ನು ಮಾತ್ರ ಜಪ್ತಿ ಮಾಡಬಹುದಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.